# ಗರ್ಬಾ ಎಂಬ ಸಮೂಹ ನೃತ್ಯ





■ ಚಿತ್ರ ಬರಹ:
**ಆಶಾ ಸಂಜೀವ ಗೌರ**

ನವರಾತ್ರಿಯ ನಯನ ಮನೋಹರ ನೃತ್ಯ ಸಂಗಮವನ್ನು ಆಸ್ವಾದಿಸಲು, ಸತತ ಎರಡನೆಯ ಬಾರಿ ಗುಜರಾತ್‌ಗೆ ಇತ್ತೀಚೆಗೆ ಹೋಗುವ ಸದವಾಕಾಶ ಒದಗಿ ಬಂದಿತ್ತು. ಗುಜರಾತ್ – ರಾಜಸ್ಥಾನ ಪ್ರಾಂತ್ಯಗಳಲ್ಲಿ ಗರ್ಬಾ ಮತ್ತು ದಾಂಡಿಯಾ ನೃತ್ಯಗಳು ವೈವಿಧ್ಯಮಯ ಹಾಗೂ ಜಗತ್ಪ್ರಸಿದ್ಧ.

ಗರ್ಬಾ ಎಂದರೆ ಗರ್ಭ ಎಂದು ಅರ್ಥ. ವರ್ತುಲಾಕಾರದಲ್ಲಿ ನೆರವೇರುವ ಪಾರಂಪರಿಕ ಸಮೂಹ ನೃತ್ಯ. ಮಧ್ಯದಲ್ಲಿ (ಅರ್ಥಾತ್ ಗರ್ಭದಲ್ಲಿ) ಒಂದು ದೀಪ / ಮಣ್ಣಿನ ಕಂದೀಲು ಅಥವಾ ಶಕ್ತಿದೇವತೆಯ (ಅಂಬಾ) ವಿಗ್ರಹ/ ಚಿತ್ರಪಟದಿಂದ ಅಲಂಕರಿಸಲಾಗುತ್ತದೆ. ರಂಗುರಂಗಿನ ಚಿತ್ತಾರಗಳಿಂದ ಅಲಂಕೃತಗೊಂಡ ಮಡಿಕೆಯಲ್ಲಿ ದೀಪವಿರಿಸುವುದು ಅಥವಾ ದೀಪಗಳಿಂದ ಅಲಂಕೃತ ಮಂಟಪವನ್ನು ಇಡುವುದು ಕೂಡ ವಾಡಿಕೆ. ಇದೇ ದೈವೀಶಕ್ತಿಯ ಕೇಂದ್ರ ಬಿಂದು. ಸುತ್ತ ವರ್ತುಲಾಕಾರದಲ್ಲಿ ನೃತ್ಯ ಮಾಡುವ ನೃತ್ಯಗಾರ/ ನೃತ್ಯಗಾರ್ತಿಯರು, ದೈವೀಶಕ್ತಿಯ ಮುಂದೆ ನಾವೆಲ್ಲ ಶೂನ್ಯವೆಂದೂ, ಈ ಎಲ್ಲಾ ಶೂನ್ಯ ರೂಪದ ಜೀವನ ಚಕ್ರ ಹಾಗೂ ಕಾಲಚಕ್ರದ ಓಝುಸ್ಸಿಗೆ ದೈವೀಶಕ್ತಿಯೇ ಕೇಂದ್ರ ಬಿಂದು ಎಂಬ ಆಧ್ಯಾತ್ಮಿಕ ತಿರುಳನ್ನು ಸಾರುತ್ತಾರೆ.

ಕಾಲಚಕ್ರವು ಜನನ, ಜೀವನ, ಮರಣ ಹಾಗೂ ಪುನರ್ಜನ್ಮಗಳೆಂಬ ಘಟ್ಟಗಳಲ್ಲಿ ತಿರುಗುತ್ತಲೇ ಇದ್ದಾಗ್ಯೂ, ಮಧ್ಯದ ಪ್ರತಿಮೆ (ಗರ್ಭ) ಮಾತ್ರ

(8ನೇ ಪುಟ ನೋಡಿ)